# ಶ್ರೀರಾಮಕೃಷ್ಣರು ಮತ್ತು ವೈಜ್ಞಾನಿಕ ಮನೋಭಾವ

ಡಾ. ಎಚ್. ರಾಮಚಂದ್ರ ಸ್ವಾಮಿ



## ವೈಜ್ಞಾನಿಕ ಮನೋಭಾವ ಎಂದರೇನು?

ವಿಜ್ಞಾನದ ಅಧ್ಯಯನವೆಲ್ಲ ದ್ರವ್ಯವಸ್ತುಗಳನ್ನು ಕುರಿತದ್ದೇ. ವಿಜ್ಞಾನಿಗಳೆನ್ನಿಸಿಕೊಂಡವರಿಗೆ ಏನನ್ನಾದರೂ ಮನದಟ್ಟು ಮಾಡಬೇಕಾದರೆ ಈ ದ್ರವ್ಯವಸ್ತುಗಳನ್ನು ಒಳಗೊಂಡಂತೆ ಹೇಳದೆ ವಿಧಿಯಿಲ್ಲ. ಜನಸಾಮಾನ್ಯರ ಪ್ರಪಂಚವಂತೂ ತುಂಬಿಹೋಗಿರುವುದು ದ್ರವ್ಯವಸ್ತುಗಳಿಂದಲೇ. ಅದರಲ್ಲೂ ಎಷ್ಟು ಬಗೆಯ, ಎಷ್ಟು ಪ್ರಮಾಣದ ದ್ರವ್ಯವಸ್ತುಗಳನ್ನು ತನ್ನದೆಂದುಕೊಳ್ಳಬಹುದು ಎನ್ನುವುದರಲ್ಲಿದೆ ಶ್ರೀಸಾಮಾನ್ಯನ ಆಢ್ಯತೆ.

ವೈಜ್ಞಾನಿಕ ಮನೋಭಾವ ಎಂದರೆ ಸಾಮಾನ್ಯವಾಗಿ ಎಲ್ಲದರಲ್ಲಿಯೂ ಕಾರ್ಯಕಾರಣ ಸಂಬಂಧವನ್ನು ಹುಡುಕುವುದು, ಅಂತಹ ಕಾರ್ಯಕಾರಣ ಸಂಬಂಧವಿಲ್ಲದಿರುವುದರಲ್ಲಿ 'ನಂಬಿಕೆ' ಇಡದೆ ಇರುವುದು. " 'ನಂಬಿಕೆ'ಯನ್ನು ನಾನು ನಂಬುವುದಿಲ್ಲ" ಎನ್ನುವುದು ಪಾಶ್ಚಾತ್ಯ ತತ್ತ್ವವಿದ ವಿಜ್ಞಾನಿ ಎನ್ನಿಸಿಕೊಂಡಿದ್ದ ಬರ್ಟ್ರಾಂಡ್ ರಸೆಲ್ ಅವರ ಮಾತು. ದಯಾಳುವೂ ಸರ್ವಭೂತಗಳ ಹಿತಚಿಂತಕನೂ ರಕ್ಷಕನೂ ಆದ ಭಗವಂತನ ಸೃಷ್ಟಿಯಲ್ಲಿ ಇಷ್ಟೊಂದು ಅಕಾರಣವಾದ ದುಃಖ ಇರುವುದೇಕೆ ಎಂಬ ಪ್ರಶ್ನೆಗೆ 'ಎಲ್ಲವೂ ಭಗವಂತನ ಲೀಲೆ' ಎಂದು ಉತ್ತರಿಸಿದರೆ ವೈಜ್ಞಾನಿಕ ಮನೋಭಾವದವರಿಗೆ ತೃಪ್ತಿಯುಂಟಾಗುವುದಿಲ್ಲ. ಜೀವಿಗಳ ದುಃಖಕ್ಕೆ ಕಾರಣವಾಗುವ ಈ ಲೀಲಾನಾಟಕದ ವಿನೋದ ಅವನಿಗೇಕೆ ಬೇಕು? ಎನ್ನುತ್ತಾರೆ ಅವರು.

ಕಾರ್ಯಕಾರಣ ಸಂಬಂಧವನ್ನು ಹುಡುಕುವುದು, ಆ ಮೂಲಕ ಸತ್ಯಾನ್ವೇಷಣೆ ಮಾಡುವುದು ಎಂಬ 'ವೈಜ್ಞಾನಿಕ' ನಿಲುವೇನೋ ಸರಿ; ಆದರೆ ನಮ್ಮಲ್ಲಿರುವ ಪರಿಕರಗಳ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳದೆ, ಎಲ್ಲವೂ ಸುಲಭವಾಗಿ, ಸರಳವಾಗಿ ತಿಳಿದುಬಿಡಬೇಕೆಂಬ ಮಕ್ಕಳಂತಹ ಹಠಮಾರಿತನವೇಕೆ? ಇಂದ್ರಿಯಗಳನ್ನು ಮೀರಿದ ಸಾಮರ್ಥ್ಯ ನಮ್ಮದಾಗಬೇಕು – ಆಗ ಸತ್ಯಾನ್ವೇಷಣೆಯ ಆಯಾಮ ವಿಸ್ತರಿಸುತ್ತದೆ; ಸಮ್ಯಕ್ ಸತ್ಯದ ಗ್ರಾಹ್ಯಭಾಗ ದೊಡ್ಡದಾಗುತ್ತದೆ. ವಿದ್ಯುನ್ಮಾನ ವಿಜ್ಞಾನದಿಂದ ಏನೇನೆಲ್ಲ ಸಾಧ್ಯವಾಯಿತು! ಎಲೆಕ್ಟ್ರಾನ್ ಮೈಕ್ರೊಸ್ಕೋಪ್ ಬಂತು; ಬರಿಗಣ್ಣಿಗೆ ಕಾಣದ ಬ್ಯಾಕ್ಟೀರಿಯಾ, ವೈರಸ್‌ಗಳೆಲ್ಲ ಕಂಡವು; ನ್ಯಾನೊ ತಂತ್ರಜ್ಞಾನ ಬೆಳೆಯಿತು. ಬೃಹತ್ ದೂರದರ್ಶಕಗಳನ್ನು ನಿರ್ಮಿಸಿದೆವು; ನಾವು ನೋಡಬಲ್ಲ ವಿಶ್ವ ವಿಸ್ತರಿಸಿತು; ಬ್ರಹ್ಮಾಂಡಗಳ ಸರಮಾಲೆಗಳನ್ನೇ ನೋಡಬಲ್ಲವರಾದೆವು. ನಮ್ಮ ಹುಟ್ಟುಸಾವುಗಳ ರಹಸ್ಯವನ್ನೇ ನಾವರಿಯದೆ ಇದ್ದರೂ ಜಗತ್ತುಗಳ ಹುಟ್ಟುಸಾವುಗಳನ್ನು ಅರಿಯಬಲ್ಲವರಾದೆವು! ಎರಡು ಸಂಖ್ಯೆ ಗುಣಾಕಾರ ಥಟ್ಟನೆ ಬಾಯಿಗೆ ಬಾರದೆ ಇದ್ದರೂ, ದೊಡ್ಡ ಸಾಮರ್ಥ್ಯದ ಕಂಪ್ಯೂಟರ್ ತಂತ್ರಜ್ಞಾನವನ್ನು ಬೆಳೆಸಿದೆವು. ಲೋಭ ಮೋಹಗಳನ್ನು ಬಿಡಲಾಗದೆ ಇದ್ದರೂ, ಭೂಮಿಯ ಗುರುತ್ವ ಕ್ಷೇತ್ರವನ್ನೇ ಬಿಟ್ಟು ವ್ಯೋಮಯಾನ ಮಾಡಬಲ್ಲವರಾದೆವು!

ಶ್ರೀರಾಮಕೃಷ್ಣರು ಆಧ್ಯಾತ್ಮಿಕ ರಂಗದ ರಹಸ್ಯಗಳನ್ನು ಅನಾವರಣ ಮಾಡಿದ ಶ್ರೇಷ್ಠ ವಿಜ್ಞಾನಿ. ಹಾಗೆಯೇ ಅವರು ವೈಚಾರಿಕತೆಗೆ ತೆರೆದ ಮನಸ್ಸುಳ್ಳವರೂ ಆಗಿದ್ದಾರೆ. ಈ ಅಂಶವನ್ನು ಮಾರ್ಮಿಕವಾಗಿ ತಿಳಿಸಿರುವ ಲೇಖಕರು ನಿವೃತ್ತ ಕಾಲೇಜು ಪ್ರಾಧ್ಯಾಪಕರು. ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠವನ್ನು ಅಲಂಕರಿಸಿದ್ದ ಅವರು, ಅನೇಕ ಗ್ರಂಥಗಳನ್ನು ಬರೆದಿದ್ದಾರೆ ಮತ್ತು ಅನುವಾದಿಸಿದ್ದಾರೆ.

## ಆಂತರಿಕ ಕ್ಷೇತ್ರದಲ್ಲಿ ಅನ್ವೇಷಣೆ

ಬಾಹ್ಯದ ಭೌತವಿಜ್ಞಾನ ಕ್ಷೇತ್ರದಲ್ಲಿ ಇವೆಲ್ಲ ಮಹಾಸಾಧನೆಗಳೇ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಆಂತರಿಕ ಕ್ಷೇತ್ರದಲ್ಲಿ

> **ಭಗವಂತನ ಅನುಭವದ ಸತ್ಯಾಂಶವನ್ನು ಪರೀಕ್ಷಿಸಬಯಸುವ ಯಾವುದೇ ವ್ಯಕ್ತಿಯು ತನ್ನ ಪ್ರಜ್ಞೆಯ ನೆಲೆಯನ್ನು ಉನ್ನತ ಹಂತಕ್ಕೆ ಏರಿಸುವುದರ ಮೂಲಕ ಆ ರೀತಿ ಮಾಡಬಹುದು; ಅದನ್ನು ಪ್ರಾರ್ಥನೆ ಮತ್ತು ಆಧ್ಯಾತ್ಮಿಕ ಸಾಧನೆಗಳ ಮೂಲಕ ಮಾಡಬೇಕು ಎಂದು ಶ್ರೀರಾಮಕೃಷ್ಣರು ಬೋಧಿಸುತ್ತಾರೆ. ಆಗ ಆ ವ್ಯಕ್ತಿಯು ಶ್ರೀರಾಮಕೃಷ್ಣರೊಡನೆ ಹೀಗೆ ಹೇಳಬಹುದು, "ನಾನು ನಿಜವಾಗಲೂ ಭಗವಂತನನ್ನು ನೋಡುತ್ತಿದ್ದೇನೆ, ನಿನ್ನನ್ನು ನೋಡುವುದಕ್ಕಿಂತಲೂ ಸ್ಪಷ್ಟವಾಗಿ ನೋಡುತ್ತಿದ್ದೇನೆ." ಅಥವಾ ಸ್ವಾಮಿ ವಿವೇಕಾನಂದರೊಡನೆ ಹೀಗೆ ಧ್ವನಿಗೂಡಿಸಲೂಬಹುದು, "ನಾನು ಭಗವಂತನ ಪಾದಗಳನ್ನು ಸ್ಪರ್ಶ ಮಾಡಿದ್ದೇನೆ."**
>
> **–ಕ್ಲೌಡ್ ಅಲಾನ್ ಸ್ಟಾರ್ಕ್**

ನಾವೇನು ಮಾಡಿದ್ದೇವೆ? ನಾವು ಯಾರು? ಎಲ್ಲಿಂದ, ಏಕೆ ಬಂದಿರುವೆವು? ನಮ್ಮ ಅಸ್ತಿತ್ವದ ಉದ್ದೇಶವೇನು? – ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಂಡಿದ್ದೇವೆಯೆ? ಮನಸ್ಸು, ಆತ್ಮ, ಭಾವ, ಬುದ್ಧಿ ಮುಂತಾದುವುಗಳ ಬಗ್ಗೆ ಯೋಚಿಸಿದ್ದೇವೆಯೆ? ನಮ್ಮ ಜೀವಿತೋದ್ದೇಶದ ಬಗ್ಗೆ ನಮಗೆ ಸ್ಪಷ್ಟ ಕಲ್ಪನೆ ಇದೆಯೆ?

ಅಪರೂಪಕ್ಕೊಮ್ಮೆ ಎಳವೆಯಲ್ಲಿಯೇ ಇಂಥ ದರ್ಶನ ಸಾಮರ್ಥ್ಯ ಇದ್ದ ವ್ಯಕ್ತಿಗಳ ಉಗಮವನ್ನು ಮಾನವ ಇತಿಹಾಸದಲ್ಲಿ ನಾವು ಕಾಣುತ್ತೇವೆ. ಪುಟ್ಟ ತಮ್ಮ ಏನಾದರೂ ಲೌಕಿಕ ವಿದ್ಯೆ ಕಲಿತು ಕುಟುಂಬದ ಜೀವನೋಪಾಯಕ್ಕೆ ದಾರಿಯಾಗಲಿ ಎಂಬ ಸದುದ್ದೇಶದಿಂದ ರಾಮಕುಮಾರನು ಗದಾಧರನನ್ನು (ಮುಂದೆ ಶ್ರೀರಾಮಕೃಷ್ಣರು) ಹಳ್ಳಿಯಿಂದ ಕೊಲ್ಕತಾಗೆ ಕರೆತಂದು ಶಾಲೆಗೆ ಸೇರಿಸಲು ಯತ್ನಿಸಿದಾಗ ಬಾಲಕ ಗದಾಧರ ಹೇಳಿದ ಮಾತನ್ನು ಗಮನಿಸಿ: "ಅಣ್ಣ, ಕೇವಲ ಅನ್ನ ಗಳಿಸುವ ವಿದ್ಯೆ ಕಟ್ಟಿಕೊಂಡು ನಾನೇನು ಮಾಡಲಿ? ಬದಲಿಗೆ, ಯಾವುದು ನನ್ನ ಹೃದಯವನ್ನು ಬೆಳಗುವುದೋ, ಯಾವುದನ್ನು ಪಡೆದು ಒಬ್ಬನು ಎಂದೆಂದಿಗೂ ತೃಪ್ತನಾಗಬಹುದೋ, ಆ ಜ್ಞಾನವನ್ನು ನಾನು ಸಂಪಾದಿಸುತ್ತೇನೆ!"

ಮುಂದೆ ಹನ್ನೆರಡು ವರ್ಷ ಶ್ರೀರಾಮಕೃಷ್ಣರು ಪ್ರಕೃತಿಯ ಅಂತರಂಗವನ್ನು ಬೆದಕುತ್ತಾ ಹೋದರು, ತಮ್ಮ ಅಂತರಂಗವನ್ನೇ ಸಂಶೋಧಿಸಿದರು; ಬಳಲಿಕೆಯರಿಯದ ಪ್ರಯೋಗಶೀಲರಾದರು. ಕೊನೆಗೆ ಶಿಶುಸಹಜ ಮೃದುಮಧುರ ಪ್ರೀತಿಯುತ ವ್ಯಕ್ತಿತ್ವವಾಗಿ, ಪರಮ ಜ್ಞಾನಿಯಾಗಿ ಅರಳಿದರು. ಮಾನವೀಯತೆ, ದೈವಿಕತೆ ಎರಡನ್ನೂ ಮೈಗೂಡಿಸಿಕೊಂಡರು. ಎಲ್ಲರನ್ನೂ ಆಕರ್ಷಿಸಿದ ಲೋಕೋತ್ತರರಾದರು!

ಇಂತಹ ಸಂಶೋಧಕ ಒಲವಿನ ನವತರುಣರ ಗುಂಪೇ ಅವರೆಡೆಗೆ ಹರಿದು ಬಂತು, ಮಾರ್ಗದರ್ಶನಕ್ಕಾಗಿ. ಇವರಲ್ಲಿ ಅಗ್ರಗಣ್ಯನಾದವನು ಸಂಶಯಗ್ರಸ್ತ ಪ್ರತಿಭಾಶಾಲಿಯಾಗಿದ್ದ ನರೇಂದ್ರ, ಬಾಹ್ಯಜಗತ್ತಿನ ಜ್ಞಾನಭಂಡಾರ ಬೇಕಾದಷ್ಟಿದ್ದರೂ, ದೃಢಶರೀರ, ವಿಮರ್ಶಕ ಬುದ್ಧಿ, ಅಪ್ರತಿಮ ಮೇಧಾಶಕ್ತಿ ಎಲ್ಲವೂ ಇದ್ದರೂ – ಅಂತರಂಗದ ಆವಿಷ್ಕರಣದ ವಿಚಾರವಾಗಿ ಅವನ ಮನಸ್ಸಿನಲ್ಲಿ ಸಂದೇಹವಿತ್ತು. ಶ್ರೀರಾಮಕೃಷ್ಣರೊಡನೆ ಇದ್ದ ಐದು ವರ್ಷಗಳಲ್ಲಿ ನರೇಂದ್ರನ ವಿದ್ಯೆ ಜ್ಞಾನವಾಯಿತು; ಜ್ಞಾನವು ವಿವೇಕವಾಯಿತು. 'ನರೇಂದ್ರ'ನಾಗಿದ್ದವನು, ವಿದ್ಯಾವರೇಣ್ಯನಾಗಿದ್ದವನು, ಶ್ರೀರಾಮಕೃಷ್ಣರನ್ನು ಮರುಳರೆಂದೇ ಸಂಶಯಿಸಿದ್ದವನು, ಕೊನೆಗೆ ವಿವೇಕದಲ್ಲಿಯೇ ಆನಂದವನ್ನು ಕಂಡುಕೊಂಡ 'ವಿವೇಕಾನಂದ' ನಾದನು; ಶ್ರೀರಾಮಕೃಷ್ಣರ ಹೆಸರೇ ಅವನ ಪಾಲಿಗೆ 'ಸಂಶಯರಾಕ್ಷಸನಾಶಮಹಾಸ್ತ್ರ'ವಾಯಿತು!

## ಭಾವರಾಜ್ಯದಲ್ಲಿ ಪ್ರಯೋಗಗಳು

ಈ ಪರಿವರ್ತನೆ ಆದದ್ದು ಹೇಗೆ? ವಿಜ್ಞಾನದ 'ಪ್ರಯೋಗ–ಅವಲೋಕನ–ತೀರ್ಮಾನ'ದ ಮಾರ್ಗದಲ್ಲಿಯೇ ಆತ್ಮ ಸಾಕ್ಷಾತ್ಕಾರ ಎಂಬುದನ್ನು ಶ್ರೀರಾಮಕೃಷ್ಣರು ಮನಗಂಡಾಗ ಅದು ಸಾಧ್ಯವಾಯಿತು. ದಕ್ಷಿಣೇಶ್ವರದ ಕಾಳೀ ದೇವಾಲಯದಲ್ಲಿ ಪೂಜೆ ಮಾಡುವ ಕೆಲಸ. ಸಂಬಳಕ್ಕಾಗಿ, ಆಶ್ರಯಕ್ಕಾಗಿ, ತುತ್ತು ಅನ್ನಕ್ಕಾಗಿ ಪೂಜೆಯೆ? ಛೀ! ಕಾಳಿ ನಿಜವಾಗಿ ಇರುವಳೆ? ಇಲ್ಲ ಎಂದಾದರೆ ಪೂಜೆ ಮಾಡುವ ವೇಷ ಕಟ್ಟುವುದಾದರೂ ಏಕೆ? ತಾಯಿ, ನೀನಿರುವೆ ಎನ್ನುವುದನ್ನು ನನ್ನ ಮನಸ್ಸಿಗೆ ಖಚಿತಪಡಿಸು ಎಂದು ಕಾಳಿಯನ್ನು ಒಲವಿನಿಂದ ಬೇಡಿದರು, ಆರ್ತರಾಗಿ ಬೇಡಿದರು; ಎಡೆಬಿಡದೆ ಪ್ರಾರ್ಥಿಸಿದರು, ಎದೆತೆರೆದು ಗೋಳಿಟ್ಟರು. ಇನ್ನೂ ತಾಯಿ ಕಾಣಿಸಲಿಲ್ಲ, ತಾಯಿಯ ದರ್ಶನವಾಗದೆ ಇನ್ನೂ ಒಂದು ದಿನ ವ್ಯರ್ಥವಾಗಿ ಕಳೆಯಿತೇ ಎಂಬ ಹತಾಶೆಯನ್ನು ಹತ್ತಿಕ್ಕಿಕೊಳ್ಳಲಾರದೆ ಸೂರ್ಯಾಸ್ತವಾಗುತ್ತಲೂ ದೇವಸ್ಥಾನದ ಅಂಗಳಕ್ಕೆ ಹಾಸಿದ್ದ ಇಟ್ಟಿಗೆಗೆ ಮುಖವನ್ನು ತಿಕ್ಕಿದರು ರಕ್ತ ಬರುವವರೆಗೂ. ಭಾವರಾಜ್ಯದಲ್ಲಿ ಇದೆಂತಹ ಪ್ರಯೋಗ! ಇಷ್ಟು ದಿನ ಪೂಜಿಸಿದ್ದು ವ್ಯರ್ಥವಾಯಿತೆಂಬ ಸಂಕಟವನ್ನು ತಾಳಲಾರದೆ ಕೊನೆಗೆ ತಾಯಿ ಕಾಳಿಯ ಚಂದ್ರಾಯುಧವನ್ನೇ ಎತ್ತಿ ತಮ್ಮನ್ನೇ ತಾವು ಬಲಿ ಕೊಟ್ಟುಕೊಳ್ಳಲು ಸಿದ್ಧರಾದರು! ಪ್ರಯೋಗದ ಫಲಿತಾಂಶವಾದ 'ತಾಯಿಯ ದರ್ಶನ' ಸಿದ್ಧಿಸಿತು, ಸಾಕ್ಷಾತ್ಕಾರವಾಯಿತು. ಈ ಅಚ್ಚರಿಯನ್ನು ಆ ಕಾಲದಲ್ಲಿ ಅಲ್ಲಿದ್ದವರೆಲ್ಲಾ 'ಅವಲೋಕಿಸಿ'ದರು; ಲೋಕವು 'ತೀರ್ಮಾನಿಸಿ'ತು – ಶ್ರೀರಾಮಕೃಷ್ಣರು ಯುಗಾವತಾರರೆಂದು!

ಮೊದಲು ದಕ್ಷಿಣೇಶ್ವರದ ಕಾಳಿ ದೇವಾಲಯದಲ್ಲಿ, ಆನಂತರ ಕಾಶಿಪುರ ತೋಟದ ಮನೆಯಲ್ಲಿ, ಶ್ರೀರಾಮಕೃಷ್ಣರ ಶಿಷ್ಯನಾಗಿ ಸಾಧನೆ ಮಾಡಿದ ಆ ಐದು ವರ್ಷಗಳಲ್ಲಿ ನರೇಂದ್ರನ ಭೌತಿಕ ಜ್ಞಾನವು ಆಧ್ಯಾತ್ಮಿಕ ವಿವೇಕವಾಗಿ ಪರಿವರ್ತಿತವಾಯಿತು. ಈ ಪರಿವರ್ತನೆಯೂ ವೈಜ್ಞಾನಿಕ ನಿಶಿತಮತಿಯಿಂದಲೇ ಆದುದು. ಅಲ್ಲಿ ಅಂಧಶ್ರದ್ಧೆಗೆ ಎಳ್ಳಷ್ಟೂ ಅವಕಾಶವಿರಲಿಲ್ಲ. ಕಣ್ಮುಚ್ಚುವ ಮುನ್ನ ಶ್ರೀರಾಮಕೃಷ್ಣರೇ ನರೇಂದ್ರನ ಈ ಮನಸ್ಸನ್ನು ಅರಿತುಕೊಂಡು ಭರವಸೆ ಕೊಡಬೇಕಾಯಿತು: "ಯಾರು ರಾಮ

ನಾಗಿದ್ದನೊ, ಯಾರು ಕೃಷ್ಣನಾಗಿದ್ದನೊ, ಅವನೇ ಈಗ ರಾಮಕೃಷ್ಣ ನಾಗಿರುವನು, ನಿನ್ನ ವೇದಾಂತದ ಅರ್ಥದಲ್ಲಲ್ಲ" ಎಂದು!

ಇಲ್ಲಿ ವೇದಾಂತ ಎಂದರೆ ನಿರಪೇಕ್ಷ ಸರ್ವಸಮತ್ವದ ಅದ್ವೈತ ಎಂದಿಟ್ಟುಕೊಂಡರೆ, ಶ್ರೀರಾಮಕೃಷ್ಣರು ಶ್ರೀರಾಮನ ಮರ್ಯಾದಾ ಪುರುಷೋತ್ತಮ ಭಾವ ಹಾಗೂ ಶ್ರೀಕೃಷ್ಣನ ಲೀಲಾಲೋಲ ಭಾವ ಮುಂತಾದುವುಗಳ ಸಮ್ಮಿಳನವನ್ನು ಕುರಿತು ಹೇಳಿರಬಹುದೆ ಎಂದೆನಿಸದೆ ಇರದು. ಶ್ರೀರಾಮಕೃಷ್ಣರ ಜೀವನವಿವರಗಳನ್ನು ಓದಿ ತಿಳಿದಿರುವವರಿಗೆ, ಏನೊಂದೂ ಕೊಂಕಿಲ್ಲದ ಅವರ ವ್ಯಕ್ತಿತ್ವದ ಸ್ವಯಂಪರಿಪೂರ್ಣತೆ ಶ್ರೀರಾಮನನ್ನೂ, ಅವರ ನಿತ್ಯದ ನಗೆಚಾಟಿಕೆ ಮತ್ತು ಲೀಲಾವಿನೋದಗಳು ಶ್ರೀಕೃಷ್ಣನನ್ನೂ ಪ್ರತಿನಿಧಿಸುತ್ತವೆ ಎನ್ನುವುದು ಹೊಳೆಯುತ್ತದೆ.

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಶ್ರೀರಾಮಕೃಷ್ಣರ ಪ್ರಯೋಗಪರೀಕ್ಷೆ ಜಗನ್ಮಾತೆ ಕಾಳಿಯ ಸಾಕ್ಷಾತ್ಕಾರವಾದೊಡನೆ ಮುಗಿದು ಹೋಗಲಿಲ್ಲ. ತಂತ್ರಸಾಧನೆ ಎನ್ನುತ್ತಾರಲ್ಲ, ಅದು ನಿಜವೆ? ಅದ್ವೈತಸಿದ್ಧಿ ಎನ್ನುವ ನಿರ್ವಿಕಲ್ಪ ಸಮಾಧಿಯನ್ನು ಪಡೆಯಬಹುದೆ? ಭಕ್ತಿ ಎಂದರೇನು? ಹನುಮಂತನ ದಾಸ್ಯಭಾವ, ಯಶೋದೆಯ ವಾತ್ಸಲ್ಯಭಾವ, ಗೋಪಿಯರ ಮಧುರಭಾವ, ಅರ್ಜುನನ ಸಖ್ಯಭಾವ –ಇವೆಲ್ಲವನ್ನೂ ಸಾಧನೆಯ ಮೂಲಕವೇ ಅವರು ಪರೀಕ್ಷಿಸಿದರು, ಸಾಕ್ಷಾತ್ಕರಿಸಿಕೊಂಡರು. ಕೊನೆಗೆ ಕ್ರೈಸ್ತಧರ್ಮ, ಇಸ್ಲಾಂಗಳೂ ಸಹ ಅದೇ ಸಾಕ್ಷಾತ್ಕಾರಕ್ಕೇ ಕೊಂಡೊಯ್ಯುತ್ತವೆ ಎನ್ನುವುದನ್ನೂ ಸಹ ಸಾಧನೆಯ ಮೂಲಕವೆ ಪರೀಕ್ಷಿಸಿ ಖಚಿತಪಡಿಸಿಕೊಂಡರು. ಆ ಧರ್ಮಗಳು ಹೇಳುವುದೂ ಸತ್ಯವನ್ನೇ ಎನ್ನುವುದನ್ನೂ ಸ್ವಾನುಭವದಿಂದ ಅರಿತರು. ಶ್ರೀರಾಮಕೃಷ್ಣರ ಸರ್ವಧರ್ಮಸಮನ್ವಯ ಒಂದು ಸಿದ್ಧಾಂತವಲ್ಲ, ವೈಜ್ಞಾನಿಕ ಪ್ರಯೋಗಪರೀಕ್ಷೆಯ ಫಲಿತಾಂಶದ ವರದಿ!

### ಬೋಧನೆಯಲ್ಲಿ ವೈಜ್ಞಾನಿಕ ಮನೋಭಾವ

ಶ್ರೀರಾಮಕೃಷ್ಣರ ಜೀವನದಲ್ಲಿ ಮಾತ್ರವಲ್ಲ, ಬೋಧನೆಯಲ್ಲಿಯೂ ಸಹ ವೈಜ್ಞಾನಿಕ ಮನೋಭಾವ ಢಾಳವಾಗಿರುವುದನ್ನು ಕಾಣಬಹುದು. 'ನಾನು' ಎಂದರೆ ಏನೆಂಬುದು ನಮಗಾರಿಗೂ ತಿಳಿಯದು. ಊಹೆಯನ್ನಾದರೂ ವೈಜ್ಞಾನಿಕವಾಗಿ ಮಾಡೋಣ. ನನ್ನ ಮನೆ, ನನ್ನ ಹೆಂಡತಿ ಮಕ್ಕಳು, ನನ್ನ ಸಿರಿಸಂಪತ್ತು ಎನ್ನುತ್ತೇವಲ್ಲ, ಇಲ್ಲಿ 'ನಾನು' ಎನ್ನುವುದು ಏನು? ಇವುಗಳೆಲ್ಲದರ ಒಡೆಯ ಎಂದೆ? ನಾನು ಎಂಬುದರ ಅರ್ಥ ಇಷ್ಟೊಂದು ಸೀಮಿತವೆ? ಶ್ರೀರಾಮಕೃಷ್ಣರು ಇದನ್ನು ಇನ್ನೂ ಮಾಗಿಲ್ಲದ ಅಹಂಕಾರ ಎನ್ನುತ್ತಾರೆ. ಬದಲಿಗೆ ವಿಶ್ವವ್ಯಾಪಿಯಾದ ದೇವರಿಗೆ ಸೇರಿದವನು, ದೇವರ ಮಗು ನಾನು ಎಂದುಕೊಂಡರೆ? ಅಥವಾ ನಿತ್ಯಮುಕ್ತನು ನಾನು, ಎಲ್ಲಕ್ಕೂ ಅತೀತನು ನಾನು ಎಂದುಕೊಂಡರೆ? ಇದನ್ನು ಶ್ರೀರಾಮಕೃಷ್ಣರು ಮಾಗಿ ಹಣ್ಣಾದ ಅಹಂಕಾರ ಎನ್ನುತ್ತಾರೆ. ಇದನ್ನೇ ಶಂಕರಾಚಾರ್ಯರು 'ಚಿದಾನಂದರೂಪಃ ಶಿವೋऽಹಂ ಶಿವೋऽಹಂ' ಎಂದಿರುವುದು.

> ರಾಮಕೃಷ್ಣ ಪರಮಹಂಸರು ಅಖಂಡದ ಪರಾಕಾಷ್ಠರಾಗಿದ್ದಾರೆ. ಅವರದು ಅತೀಂದ್ರಿಯ ಪ್ರಜ್ಞೆಯ ಬದುಕು. ಅಂತಹ ಬದುಕು ಮಾತ್ರವೇ ನಮ್ಮೆಲ್ಲರನ್ನೂ ಒಳಗೊಂಡಿರುವ ಪ್ರಜ್ಞಾಸಾಗರದ ಅನಂತ ಅಲೆಗಳಿಗೆ ಸಾಕ್ಷಿಯಾಗಬಲ್ಲುದು. ಇದುವರೆಗಿನ ಬದುಕಿನಲ್ಲಿ ನಮ್ಮ ಹಿನ್ನೆಲೆಯಾಗಿದ್ದ ದಿವ್ಯಶಕ್ತಿಗೆ ಆಧಾರವೇ ಅವರು. ಹಾಗೆಯೇ ನಮ್ಮ ಭವಿಷ್ಯಕ್ಕೂ ಅವರೇ ಆಧಾರಭೂತರಾಗಿದ್ದಾರೆ.
>
> –ಶ್ರೀಅರವಿಂದರು

ಇಂತಹ ತತ್ತ್ವಜ್ಞಾನದ ಚಿಂತನೆ ಎಲ್ಲರಿಗೂ ಸಾಧ್ಯವಾಗುವುದಿಲ್ಲ ಎಂದೇ ಇಟ್ಟುಕೊಳ್ಳೋಣ. ಸಾಮಾನ್ಯರಿಗೆ ಶ್ರೀರಾಮಕೃಷ್ಣರ ಸಂದೇಶವೇನು? ಈ ಮಂತ್ರವನ್ನು ಇಷ್ಟು ಸಲ ಜಪಿಸಿ, ಇಂತಹ ವ್ರತವನ್ನು ಹೀಗೆ ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಿ, ಇಂತಹ ದೇವರ ರೂಪವನ್ನು ಮನಸ್ಸಿನಲ್ಲಿ ಪರಿಭಾವಿಸಿ ಧ್ಯಾನ ಮಾಡಿ ಎಂದೆ? ಇದೆಲ್ಲ ನಂಬಿಕೆಯ, ಶ್ರದ್ಧೆಯ ಪ್ರಶ್ನೆಯಾಯಿತು. ಎಲ್ಲರಿಗೂ ಈ ಶ್ರದ್ಧೆ ಇರುವುದಿಲ್ಲ ತಾನೆ? ಅಂಥವರಿಗೆ ಶ್ರೀರಾಮಕೃಷ್ಣರ ಉಪದೇಶ ಏನು? ಅಂಥವರಿಗೆ ಸಾಮಾನ್ಯ ಪರಿಜ್ಞಾನದ ಉಪದೇಶ ಬೇಕಾದ ಹಾಗೆ ಇದೆ. 'ಎಲ್ಲವೂ ಬ್ರಹ್ಮ' ಎಂದು ಗುರುಗಳು ಹೇಳಿದ್ದನ್ನು ನಂಬಿ ಆನೆಗೆ ಅಡ್ಡ ನಿಂತು ಬೀಸಿ ಒಗೆಯಲ್ಪಟ್ಟ ಶಿಷ್ಯನಿಗೆ "ಮಾವಟಿಗ ಬ್ರಹ್ಮ ದಾರಿ ಬಿಡು ಎಂದು ಹೇಳಿದ್ದು ಕೇಳಲಿಲ್ಲವೇನಯ್ಯಾ?" ಎಂದು ಬುದ್ಧಿ ಹೇಳಿದ ಗುರು; "ಹಿಂಸೆ ಮಾಡಬೇಡ ಎಂದು ಹೇಳಿದ್ದೆನೇ ಹೊರತು ಬುಸುಗುಟ್ಟಿ ಹೆದರಿಸಬೇಡ ಎಂದು ಹೇಳಿದ್ದೆನೆ?" ಎಂದು ಹಾವಿಗೆ ಬುದ್ಧಿ ಹೇಳಿದ ಬ್ರಹ್ಮಚಾರಿ; ಅದ್ವೈತವನ್ನು ಅರಿತುಕೊಳ್ಳಲು ಯತ್ನಿಸುವವನ ಪಾಡು ಉಪ್ಪಿನ ಬೊಂಬೆಯೊಂದು ಸಮುದ್ರದ ಆಳವನ್ನು ಅಳೆಯಲು ಹೊರಟಂತಾಗುತ್ತದೆ ಎಂಬ ಸಾಮತಿ – ಇವೆಲ್ಲವೂ ಶ್ರೀರಾಮಕೃಷ್ಣರ ವೈಜ್ಞಾನಿಕ ಮನೋಭಾವವನ್ನೇ ಪ್ರತಿಬಿಂಬಿಸುತ್ತವೆ.

### ನಂಬಿ ಕೆಟ್ಟವರಿಲ್ಲವೋ

ಸಾಕ್ಷಾತ್ಕಾರವೇ ಧರ್ಮ, ಚರ್ಚೆಯಲ್ಲ ಎಂಬ ಆಧ್ಯಾತ್ಮಿಕ ಜೀವನದ ಮೂಲಭೂತ ಅಂಶವನ್ನು ಶ್ರೀರಾಮಕೃಷ್ಣರು ಒತ್ತಿ ಹೇಳುತ್ತಾರೆ. ವಿಜ್ಞಾನ ಅಥವಾ ಗಣಿತದಂತಹ ಕ್ಲಿಷ್ಟ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಬುದ್ಧಿಯನ್ನು ದುಡಿಸಿದರೆ, ಸಾಹಿತ್ಯ ಸಂಗೀತ ಕಲೆಗಳ ಭಾವಾಂತರಂಗದಲ್ಲಿ ಮನಸ್ಸನ್ನು ತೊಡಗಿಸಿ ಅನುರಣಿಸಿದರೆ, ಸಿಕ್ಕುವ ಧನ್ಯತೆಯನ್ನು ಸಾಮಾನ್ಯವಾಗಿ ಎಲ್ಲರೂ

ಅನುಭವಿಸಿರುತ್ತಾರೆ. ಅಂತೆಯೇ ಗುರುವಿನ ಮಾರ್ಗದರ್ಶನ ದಂತೆ ಆಧ್ಯಾತ್ಮಿಕಸಾಧನೆ ಮಾಡಿದಾಗ ದೊರಕುವ ಆನಂದವನ್ನೂ ಬಲ್ಲವರೇ ಬಲ್ಲರು. ಆಧ್ಯಾತ್ಮಿಕ ಜೀವನದ ಮೂಲಭೂತ ತಳಹದಿಯೇ ವಿಶ್ವವನ್ನು ಸುಸ್ಥಿತಿಯಲ್ಲಿಟ್ಟು ಮುನ್ನಡೆಸುತ್ತಿರುವ ಮಹಾಶಕ್ತಿಯೊಂದರಲ್ಲಿ ನಂಬಿಕೆ. ಐನ್‌ಸ್ಟೈನ್‌ರಂತಹ ವಿಜ್ಞಾನಿಗಳೂ ಇದನ್ನು ನಂಬುತ್ತಾರೆ. ಈ ನಂಬಿಕೆ ತಪ್ಪದಂತೆ, ಮರೆಯದಂತೆ ಎಚ್ಚರವಾಗಿರಬೇಕು ಎನ್ನುವುದು ಶ್ರೀರಾಮಕೃಷ್ಣರ ಒಂದು ಮುಖ್ಯವಾದ ಬೋಧನೆ. ಮಾವಿನ ತೋಪಿಗೆ ಹೋದವನು ಮರಗಳನ್ನು ಎಣಿಸಿ ಬೆಲೆಯನ್ನು ಲೆಕ್ಕಹಾಕುವ ಬದಲು ಹಣ್ಣನ್ನು ತಿಂದು ಆನಂದಪಡಬೇಕು ಎನ್ನುತ್ತಾರೆ ಅವರು. ಪರಿಹಾರವಾಗದ ಸಂಶಯಗಳ ಕಗ್ಗಂಟನ್ನು ಬಿಡಿಸಲು ಯತ್ನಿಸುವುದರಲ್ಲೇ ಆಯುಸ್ಸನ್ನು ವ್ಯರ್ಥಮಾಡಿಕೊಳ್ಳುವ ಬದಲು, 'ನಂಬಿ ಕೆಟ್ಟವರಿಲ್ಲವೋ' ಎಂದು ನೆಮ್ಮದಿಯನ್ನು ಪಡೆಯುವುದು ಒಳ್ಳೆಯದು. ಸುಮ್ಮನೆ ಗಿರಿಗಿರಿ ಸುತ್ತಿದರೆ ತಲೆತಿರುಗಿ ಬೀಳಬೇಕಾಗುತ್ತದೆ. ಆದರೆ ಒಂದು ಕೈಯಲ್ಲಿ ಕಂಬವನ್ನು ಹಿಡಿದುಕೊಂಡು (ಎಂದರೆ ದೇವರನ್ನು ನಂಬಿ) ಸುತ್ತಿದರೆ (ಎಂದರೆ ಪ್ರಪಂಚದಲ್ಲಿ ವ್ಯವಹರಿಸಿದರೆ) ಬೀಳುವ ಭಯವಿರುವುದಿಲ್ಲ ಎನ್ನುವುದು ಅವರ ಕಿವಿಮಾತು. ಅವರ ಮಾತುಗಳಲ್ಲಿ ಇಂತಹ ನೂರಾರು ಸಾಮತಿಗಳಿವೆ.

ಈ ಜಗತ್ತಿನಲ್ಲಿ ಯಾವುದೂ ಸರಿ ಇಲ್ಲ ಎನ್ನುವುದು ಅರ್ಧ ಸತ್ಯ. ಎಲ್ಲವೂ ಸರಿಯಾಗಿದೆ ಎನ್ನುವುದೂ ಅರ್ಧ ಸತ್ಯ. ಶೂನ್ಯ, ಅನಂತ, ಪರಿಪೂರ್ಣ ಕಪ್ಪು ವಸ್ತು, ಪರಿಪೂರ್ಣ ಬಿಳಿಯ ಹಿನ್ನೆಲೆ, ನಿರಪೇಕ್ಷ ಶೂನ್ಯದ ಉಷ್ಣತೆ – ಎಲ್ಲವೂ ಕಲ್ಪನೆಗಳೇ. ಆದರೂ ನಾವು ಇವುಗಳನ್ನು ಬಳಸುತ್ತೇವೆ. ಇದರಂತೆಯೇ ದೇವರೆನ್ನುವುದು ಒಂದು ವೇಳೆ ಕಲ್ಪನೆಯೇ ಆಗಿದ್ದರೂ, ಅದನ್ನು ಆಶ್ರಯಿಸುವುದರಿಂದ ನಮಗೆ ಒಳಿತಾಗುವುದಾದರೆ ಏಕೆ ನೆಮ್ಮಿಕೊಳ್ಳಬಾರದು? ಸರಿಪಡಿಸಲು ಎಂದೂ ಸಾಧ್ಯವಾಗದ ಲೋಕದ ಕೋರೆಗಳ ಕುರಿತು ಕೊರಗುವುದಕ್ಕಿಂತ ಭಗವಂತನೆಂಬ ಈ ಆಶ್ರಯದಲ್ಲಿ ಏಕೆ ಆನಂದವನ್ನು ಕಂಡುಕೊಳ್ಳಬಾರದು? ಶ್ರೀರಾಮಕೃಷ್ಣರು ಹೇಳುವುದು ಇದನ್ನೇ. ಜನರಲ್ಲಿರುವ ವಿವಿಧ ರೀತಿಯ ಓರೆಕೋರೆಗಳನ್ನು ಕುರಿತು ಯಾರೊಬ್ಬರಿಗೂ ಮನ ನೋಯದಂತೆ ಅವರು ಲೇವಡಿಯೆಬ್ಬಿಸುತ್ತಾರಾದರೂ, ಭಗವಂತನನ್ನು ಕುರಿತು ಮಾತನಾಡುವುದನ್ನು ಅವರು ಒಂದೇ ಒಂದು ಸಂದರ್ಭದಲ್ಲಿಯೂ ಮರೆಯುವುದಿಲ್ಲ. ನಾಣ್ಯವನ್ನು ಠಣ್ ಎಂದು ಹಾರಿಸಿ ಅದು ಖೋಟಾ ಅಲ್ಲವೆಂದು ಖಚಿತಪಡಿಸಿಕೊಳ್ಳುವಂತೆ, ಗುರುವನ್ನು ಪರೀಕ್ಷಿಸಿಯೇ ಸ್ವೀಕರಿಸಬೇಕು ಎನ್ನುತ್ತಾರೆ. ತಮಗರಿವಿಲ್ಲದಂತೆ ನರೇಂದ್ರ ಮಾಡಿದ ತಮ್ಮ ಕಾಂಚನತ್ಯಾಗದ ಪರೀಕ್ಷೆಯನ್ನು, ಯೋಗಿನ್ ಮಾಡಿದ ತಮ್ಮ ಕಾಮತ್ಯಾಗದ ಪರೀಕ್ಷೆಯನ್ನು ಮೆಚ್ಚುತ್ತಾರೆ, ಪ್ರೋತ್ಸಾಹಿಸುತ್ತಾರೆ. ಮತ್ತೊಂದೆಡೆ ಶಿಷ್ಯರ ಅರೆಕೊರೆಗಳನ್ನು ಭರ್ತ್ಸನೆ ಮಾಡಿ ತಿದ್ದುವುದರಲ್ಲಿಯೂ ಅವರು ಹಿಂದೆ ಬೀಳುವುದಿಲ್ಲ. ರಾಖಾಲನ ಭಾವವನ್ನು ನಾಶಮಾಡಲು ನಿನಗೇನು ಅಧಿಕಾರವಿದೆ ಎಂದು ನರೇಂದ್ರನನ್ನು ಬೈಯುತ್ತಾರೆ; ಅಂಗಡಿಯಲ್ಲಿ ದುಡ್ಡುಕೊಟ್ಟು ಸಾಮಾನನ್ನು ತರುವಾಗ ಅದು ಚೆನ್ನಾಗಿದೆ ಎಂದು ಖಚಿತಪಡಿಸಿಕೊಂಡೇ ತರಬೇಕು ಎಂದು ಯೋಗಿನ್‌ನನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಇವೆಲ್ಲವೂ ಅವರ ವೈಜ್ಞಾನಿಕ ಮನೋಭಾವವನ್ನೇ ಪ್ರತಿನಿಧಿಸುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.

### ಪ್ರತ್ಯಕ್ಷಶಿಷ್ಯರು ಕಂಡಂತೆ ಶ್ರೀರಾಮಕೃಷ್ಣರು

**ಮಾ**ನವತೆಗೆ ವೈರಾಗ್ಯವನ್ನು ಬೋಧಿಸಲೆಂದೇ ಶ್ರೀರಾಮಕೃಷ್ಣರು ಈ ಆಧುನಿಕ ಯುಗದಲ್ಲಿ ಅವತಾರವೆತ್ತಿದ್ದಾರೆ.
–ಸ್ವಾಮಿ *ಬ್ರಹ್ಮಾನಂದ*

**ಶ್ರೀ**ರಾಮಕೃಷ್ಣರಲ್ಲಿ ಅಹಂಕಾರವು ಸ್ವಲ್ಪವೂ ಇರಲಿಲ್ಲ. ಅವರು ಜಗನ್ಮಾತೆಗೆ ತಮ್ಮ ವಕಾಲತ್ತನ್ನು ಕೊಟ್ಟುಬಿಟ್ಟಿದ್ದರು.
–ಸ್ವಾಮಿ *ಪ್ರೇಮಾನಂದ*

**ಶ್ರೀ**ಗುರುದೇವರ ಮಕ್ಕಳೆಂದು ಕರೆದುಕೊಳ್ಳುವವರು ಯೋಗ, ಭಕ್ತಿ, ಕರ್ಮ, ಜ್ಞಾನ ಎಲ್ಲವನ್ನೂ ಹೊಂದಿರಬೇಕು. ಏಕೆಂದರೆ, ಶ್ರೀರಾಮಕೃಷ್ಣರು ಎಲ್ಲ ಬಗೆಯ ಧಾರ್ಮಿಕ ಮಾರ್ಗಗಳ ಸಮನ್ವಯಕಾರರಾಗಿದ್ದಾರೆ, ಸಮಷ್ಟಿಸ್ವರೂಪವಾಗಿದ್ದಾರೆ. ಒಂದು ಮಾರ್ಗವನ್ನು ಅವಲಂಬಿಸುವ ಆಧ್ಯಾತ್ಮಿಕ ಪ್ರಗತಿಯೆಂಬುದು ಹಳೆಯ ಕಾಲದ ನಿಯಮ. ಇಂದು ತನ್ನ ಸರ್ವತೋಮುಖ ಅಭಿವೃದ್ಧಿಯೊಂದಿಗೆ, ಇತರರ ಮಾರ್ಗಗಳನ್ನೂ ಸಹಾನುಭೂತಿಯಿಂದ ಕಾಣುವುದನ್ನು ಒಬ್ಬನು ಬೆಳೆಸಿಕೊಳ್ಳಬೇಕು.
–ಸ್ವಾಮಿ *ತುರೀಯಾನಂದ*

**ಭ**ಗವಾನ್ ಶ್ರೀರಾಮಕೃಷ್ಣರು ಖಂಡಿತವಾಗಿಯೂ ನಿನ್ನನ್ನು ಅನುಗ್ರಹಿಸುತ್ತಾರೆ. ನೀನು ಅವರನ್ನು ಸಹಾಯಕ್ಕಾಗಿ ಯಾಚಿಸಬೇಕಷ್ಟೇ. ಅವರು ಪ್ರೀತಿ ಮತ್ತು ಕರುಣೆಗಳ ಅಪರಾವತಾರ.
–ಸ್ವಾಮಿ *ರಾಮಕೃಷ್ಣಾನಂದ*

**ಶ್ರೀ**ರಾಮಕೃಷ್ಣರು ಪ್ರಾರ್ಥನೆ ಮತ್ತು ಧ್ಯಾನಾಭ್ಯಾಸಗಳಿಗೆ ಮಹತ್ವ ನೀಡಿದ್ದರು.
–ಸ್ವಾಮಿ *ಶಾರದಾನಂದ*

**ಗು**ರುದೇವರು ನಾರಾಯಣರೂಪದಲ್ಲಿ ಎಲ್ಲೆಡೆ ಇರುವರು, ಸಂಚರಿಸುವರು. ಸೇವಾಧರ್ಮದ ಬೀಜವು ಅವರಲ್ಲಿದ್ದಿತು.
–ಸ್ವಾಮಿ *ಅಖಂಡಾನಂದ*